**ಅ.ದಾವಾ. 91/2022** **ಪಿ.ಡಬ್ಲ್ಯೂ- 1**

**ದಿನಾಂಕಃ 18/03/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಂದುವರಿಂದ ಪಾಟೀಸವಾಲುಃ- ಶ್ರೀ ಹೆಚ್.ಆರ್.ಜೆ. ವಕೀಲರಿಂದ 1 ರಿಂದ 5ನೇ ಪ್ರತಿವಾದಿಗಳ ಪರವಾಗಿ.**

ನಿಮ್ಮ ತಂದೆ ಯಾವಾಗ ಮರಣ ಹೊಂದಿರುವುದು ಎಂದು ತಿಳಿದಿದೆಯೇ ಎಂದರೆ ಸಾಕ್ಷಿಯು ಒಂದು

ಚೀಟಿಯಲ್ಲಿ ದಿನಾಂಕವನ್ನು ಬರೆದುಕೊಂಡು ಬಂದಿದ್ದು, ಅದನ್ನು ನೋಡಿ ದಿ.12.09.2007 ಎಂದು ನುಡಿಯುತ್ತಿದ್ದಾರೆ. ನನ್ನ ತಾಯಿ 1992 ರ ಅಕ್ಟೋಬರ್ ತಿಂಗಳಲ್ಲಿ ಮರಣ ಹೊಂದಿರುತ್ತಾರೆ. ನನ್ನ ತಾಯಿ ಮರಣ ಹೊಂದಿದ ತಾರೀಖು ನನಗೆ ನೆನಪಿಲ್ಲ. ನನ್ನ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸಿ ನಿವೃತ್ತಿ ಹೊಂದಿದ್ದರು ಎಂದರೆ ಸರಿ . ನಿಮ್ಮ ತಂದೆ ಮರಣ ಹೊಂದುವ ಮುಂಚೇ ಹೊಳೆನರಸೀಪುರದಲ್ಲಿ ಸುಮಾರು 10 ರಿಂದ 15 ವರ್ಷಗಳಿಂದ ವಾಸವಾಗಿದ್ದರು ಎಂದರೆ ಸಾಕ್ಷಿಯು ನನ್ನ ತಂದೆ ಸ್ವತಃ ವಾಸವಾಗಿರಲಿಲ್ಲ, ಅವರು ನನ್ನ ತಮ್ಮನ ಜೊತೆ ವಾಸವಾಗಿದ್ದರು ಎಂದು ನುಡಿಯುತ್ತಾರೆ.

6ನೇ ಪ್ರತಿವಾದಿ ಹೊಳೆನರಸೀಪುರದ ಪುರಸಭೆಯಿಂದ ನನ್ನ ತಂದೆಯ ಮರಣ ಪ್ರಮಾಣ ಪತ್ರವನ್ನು ಪಡೆದುಕೊಂಡು ನಿವೃತ್ತಿ ವೇತನ ಸ್ಥಗಿತಗೊಳಿಸಲು ಅರ್ಜಿ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. 6ನೇ ಪ್ರತಿವಾದಿ ಪಡೆದುಕೊಂಡಿರುವ ನನ್ನ ತಂದೆಯ ಮರಣ ಪ್ರಮಾಣದಲ್ಲಿ ನಮೂದಿಸಿರುವ ಮರಣದ ದಿನಾಂಕಕ್ಕೂ ನಿಪಿ.11 ರಲ್ಲಿ ನಮೂದಿಸಿರುವ ಮರಣ ದಿನಾಂಕಕ್ಕೂ ವ್ಯತ್ಯಾಸ ಇದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ.12 ರಲ್ಲಿ ನಿಮ್ಮ ತಾಯಿ ಮರಣ ಹೊಂದಿದ ತಿಂಗಳು, ದಿನಾಂಕ ಹಾಗೂ ವರ್ಷ ವ್ಯತ್ಯಾಸ ಇದೆ ಎಂದರೆ ಸಾಕ್ಷಿಯು ನಾನು ನ್ಯಾಯಾಲಯಕ್ಕೆ ಕೊಟ್ಟಿರುವುದು ಸರಿಯಾಗಿದೆ ಎಂದು ನುಡಿಯುತ್ತಾರೆ. ನಿಪಿ.11 ಮತ್ತು 12 ಅನ್ನು ನಾನು ಇದೇ ನ್ಯಾಯಾಲಯದಲ್ಲಿ ಕ್ರಿ.ಮಿಸ್ . ಅರ್ಜಿಗಳನ್ನು ಸಲ್ಲಿಸಿ ಈ ದಾವೆಗಾಗಿ ಪಡೆದುಕೊಂಡಿದ್ದೀರಿ ಎಂದರೆ ಸಾಕ್ಷಿಯು ಈ ದಾವೆಗಾಗಿ ಅಲ್ಲ, ನನಗೆ ಬೇಕಾಗಿದ್ದರಿಂದ ನಾನು ತೆಗೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ.11 ಮತ್ತು 12 ಅನ್ನು ನಾನು 2020 ನೇ ಸಾಲಿನಲ್ಲಿ ಪಡೆದುಕೊಂಡಿರುತ್ತೇನೆ. ನಿಪಿ.11 ಮತ್ತು 12 ರಲ್ಲಿ ಇರುವ ಮಾಹಿತಿಗೂ ನಿಮ್ಮ ತಂದೆಯ Pension clearance Certificate ನಲ್ಲಿ ಇರುವ ಮಾಹಿತಿಗೂ ವ್ಯತ್ಯಾಸ ಇದ್ದು, ದಾವಾನುಸೂಚಿ ಸ್ವತ್ತುಗಳನ್ನು ಲಪಟಾಯಿಸುವ ಉದ್ದೇಶದಿಂದ ನಾನು ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಮ್ಮ ತಂದೆ ಮರಣ ಹೊಂದುವವರೆಗೂ ನಿಮ್ಮ ತಮ್ಮನ ಜೊತೆ ಇದ್ದು, 6ನೇ ಪ್ರತಿವಾದಿ ನಿಮ್ಮ ತಂದೆಯ ಮರಣ ಪ್ರಮಾಣಪತ್ರವನ್ನು ಪುರಸಭೆಯಿಂದ ಪಡೆದುಕೊಂಡು ಬ್ಯಾಂಕ್ ಗೆ ನೀಡಿರುತ್ತಾರೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ನಾನು ಕಂದಾಯ ಅಧಿಕಾರಿಗಳೊಂದಿಗೆ ಷರೀಕ್ಕಾಗಿ ಹಿರೇಬೆಳಗುಲಿ

ಗ್ರಾಮದ ವಿಳಾಸವನ್ನು ನೀಡಿ ನಿಪಿ.11 ಮತ್ತು 12 ಅನ್ನು ಪಡೆದುಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸ.ಇ.

ಜೆ.ಎಂ.ಎಫ್.ಸಿ., ಹೊಳೆನರಸೀಪುರ.